**<u>ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬಂಗಾರಪೇಟೆ</u>**

**<u>ಸಿ.ಸಿ. ನಂ.942/2026</u>**

**ಫಿರ್ಯಾದುದಾರರುಃ** **ರಾಜ್ಯಪರ ಪೋಲೀಸರು**,
ಬಂಗಾರಪೇಟೆ ಪೋಲೀಸ್ ಠಾಣೆ.,

-ವಿರುದ್ಧ-

**ಆರೋಪಿಃ** **ಮಂಜಿತ್**.,
ಬಿನ್ ಪ್ರಕಾಶ,
ಸುಮಾರು 40 ವರ್ಷ,
ವಾಸಃ ಅಮರಾವತಿ ನಗರ,
ಬಂಗಾರಪೇಟೆ.

**ಶ್ರೀ ಚಂದ್ರಶೇಖರ್ ಅಲಬೂರ್** ಬಿ.ಎ. ಎಲ್ಎಲ್.ಬಿ (ಆನರ್ಸ್) ಸ.ಪ್ರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ,. ಆದ ನಾನು

**<u>ಆಪಾದನೆ</u>**

ದಿನಾಂಕ 16.04.2026 ರಂದು ರಾತ್ರಿ ಸುಮಾರು 09.00 ಗಂಟೆಯಿಂದ 10.30 ಗಂಟೆ ಸಮಯದಲ್ಲಿ ಆರೋಪಿಯಾದ ನೀನು ಬಂಗಾರಪೇಟೆ ಪೊಲೀಸ್ ಠಾಣಾ ಸರಹದ್ದಿನ, ಎಪಿಎಂಸಿ ಮಾರುಕಟ್ಟೆಯಲ್ಲಿ ಕುಳಿತುಕೊಂಡು ಯಾವುದೇ ಅನುಮತಿ ಇಲ್ಲದೆ OPPO Find X9 Pro ಮೊಬೈಲ್ ನಲ್ಲಿ SAT BET ಎಂಬ ವೆಬ್ ಸೈಟ್ ನಲ್ಲಿ ಬೇರೆಯವರಿಂದ ಹಣ ಪಡೆದು ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದು ನಿಮ್ಮ ಮೇಲೆ ಪಂಚರ ಸಮಕ್ಷಮ ದಾಳಿ ಮಾಡಿದಾಗ ನಿಮ್ಮ ಬಳಿ ಇದ್ದ 2000/– ರೂಗಳು ಮತ್ತು ಮೊಬೈಲ್ ನ್ನು ಪಂಚರ ಸಮಕ್ಷಮ ಅಮಾನತ್ತು ಪಡೆಸಿಕೊಂಡಿದ್ದು, ಈ ಮೂಲಕ ಆರೋಪಿಗಳಾದ ನೀವುಗಳು (ಕೆ.ಪಿ) ಕರ್ನಾಟಕ ಪೊಲೀಸ್ ಕಾಯ್ದೆ ಕಲಂ 78ರ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ ಎಂದು ಆಪಾದಿಸುತ್ತೇನೆ.

ಈ ಮೇಲೆ ತಿಳಿಸಿದ ಆಪಾದನೆಗೆ ನೀವುಗಳು ಗುರಿಯಾಗಬೇಕೆಂದು ಈ ಮೂಲಕ ನಾನು ನಿರ್ದೇಶಿಸುತ್ತೇನೆ.

ಪ್ರಶ್ನೆಃ ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರಃ

ಪ್ರಶ್ನೆಃ ನೀವುಗಳು ಸದರಿ ಆಪಾದನೆಯನ್ನು ಒಪ್ಪಿ ಕೊಳ್ಳುತೀರಾ? ಅಥವಾ ನಿಮ್ಮಗಳ ವಿರುದ್ದ ವಿಚಾರಣೆ ನಡೆಯಬೇಕೇ ?

ಉತ್ತರಃ

(ಮೇಲಿನ ಆಪಾದನೆಯನ್ನು ಆಪಾದಿತರಿಗೆ ತಿಳಿದಿರುವ ಭಾಷೆಯಲ್ಲಿ ಒದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 04.07.2026.

**ಸಹಿ/-**
**ಸ.ಪ್ರ.ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ.**